

## ಕೊಂಬಿನ ಅಣಬೆ

ಮಲೆನಾಡಿನಲ್ಲಿ ಮಳೆಗಾಲದುದ್ದಕ್ಕೂ ನೆಲದ ತೇವದ ಹದಕ್ಕೆ ಅಣಬೆಗಳು ಸಾಮಾನ್ಯವಾಗಿ ಎಲ್ಲೆಡೆ ಬೆಳೆಯುತ್ತವೆ. ಉತ್ತರ ಕನ್ನಡದ ಯಲ್ಲಾಪುರ ತಾಲ್ಲೂಕಿನ ಹೊನ್ನಗದ್ದೆಯ ಬಸ್ ನಿಲ್ದಾಣದಲ್ಲಿ ಕೊಂಬಿನ ಅಣಬೆಗಳು ಮೊಳೆತು ಕುಳಿತಿವೆ. ಈ ಅಣಬೆಗಳು ಸಿಮೆಂಟ್ ಗೋಡೆ ಮತ್ತು ನೆಲಹಾಸುಗಳ ನಡುವಿನ ಬಿರುಕಿನಲ್ಲಿ ತಲೆ ಎತ್ತಿರುವುದು ವಿಶೇಷ. ಪ್ರಾಣಿಗಳ ಚೂಪಾದ ಕೊಂಬುಗಳ ಆಕಾರದಲ್ಲಿ ಕಂಡುಬಂದ ಈ ಅಣಬೆಗಳು ಮೃದುವಾಗಿರುತ್ತವೆ. ಮುಟ್ಟಿದರೆ ಪುಡಿ ಪುಡಿಯಾಗಿ ಉದುರುವ ಇವು, ತಿನ್ನಲು ಯೋಗ್ಯವಲ್ಲ. ಸುತ್ತಮುತ್ತಲಿನ ದಾರಿಹೋಕರಿಗೆ ಕಣ್ಣರಳಿಸಿ ನೋಡುವಂತೆ ತನ್ನ ಇರುವಿಕೆಯನ್ನು ವಿಶಿಷ್ಟವಾಗಿ ಪ್ರಚುರಪಡಿಸುತ್ತಿವೆ.

–ದತ್ತಾತ್ರೇಯ ಭಟ್ಟ ಕಣ್ಣಿಪಾಲ, ಯಲ್ಲಾಪುರ

## ಶಾಲೆಯೊಂದರ ಸ್ಥಿ(ಮ)ರಾಸ್ತಿ

ಇಲ್ಲೊಂದು ಮರ ಇಡೀ ಶಾಲೆಗೇ ದೊಡ್ಡ ಆಸ್ತಿಯಾಗಿದೆ. 'ಫೈಕಸ್ ರಿಲಿಜಿಯೋಸ್' ಎಂಬ ವೈಜ್ಞಾನಿಕ ಹೆಸರಿರುವ ಈ ಮರ ಹಳ್ಳಿಗರ ಬಾಯಲ್ಲಿ ಅರಳಿಮರವೆಂದೇ ಪ್ರಸಿದ್ಧಿ. ವಿಶಾಲವಾಗಿ ಹಬ್ಬುವ ಗುಣವುಳ್ಳ ಈ ಮರವು ಹೆಚ್ಚಿನ ಪ್ರಮಾಣದ ಆಮ್ಲಜನಕ ಉತ್ಪಾದನೆ ಮಾಡುತ್ತದೆ. ಹಗಲು ಸೂರ್ಯನ ಬೆಳಕಿನಲ್ಲಿ, ಇರುಳು ಚಂದ್ರನ ಬೆಳಕಿನಲ್ಲಿ ದ್ಯುತಿಸಂಶ್ಲೇಷಣೆ ಕ್ರಿಯೆ ನಡೆಸುವುದು ಈ ಮರದ ವಿಶೇಷ.

ಅಂದಹಾಗೆ, ಈಚೆಗೆ ನಡೆದ ಪರೀಕ್ಷೆಯಲ್ಲಿ ಪಾಲ್ಗೊಂಡಿದ್ದ 280ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಕೆಲ ಶಿಕ್ಷಕರಿಗೆ ಈ ಮರ ಆಶ್ರಯ ನೀಡಿದ್ದು ವಿಶೇಷ ಎನಿಸಿತು. ಪ್ರತಿನಿತ್ಯ ಈ ಮರದಡಿಯೇ ಮಕ್ಕಳ ಪ್ರಾರ್ಥನೆ, ಹಾಲು ಕುಡಿಯುವ ಕಾರ್ಯ, ಆಟವಾಡುವುದು, ಸಭೆ ನಡೆಸುವ ಚಟುವಟಿಕೆ ನಡೆಯುತ್ತದೆ. ಬೇಸಿಗೆಯಲ್ಲಂತೂ ವಿದ್ಯಾರ್ಥಿಗಳು ಈ ಮರದ ನೆರಳಿನಲ್ಲಿ ಕೂತು ಪಾಠ ಕೇಳಲು ಹೆಚ್ಚು ಇಷ್ಟಪಡುತ್ತಾರೆ. ಶಾಲೆಗೆ ಕಳಸದಂತಿರುವ ಈ ಮರ ಲಕ್ಷಾಂತರ ಕೀಟಗಳು, ನೂರಾರು ಹಕ್ಕಿಗಳಿಗೆ, ಆಶ್ರಯ ಒದಗಿಸಿದೆ. ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಬಾಚಿಗೊಂಡನಹಳ್ಳಿಯ ಸ.ಹಿ.ಪ್ರಾ.ಶಾಲೆಯಲ್ಲಿ ಈ ಮರವನ್ನು ನೋಡಬಹುದು.

–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ







## ಅಕಾಲ ಮೃತ್ಯು ಮೋಕ್ಷ ಸ್ತೂಪ

ಶುಕವನವು ಮೈಸೂರಿನ ಪ್ರಮುಖ ಆಕರ್ಷಣೆಗಳಲ್ಲೊಂದು. ಇಲ್ಲಿರುವ ಅಕಾಲ ಮೃತ್ಯು ಮೋಕ್ಷ ಸ್ತೂಪಗಳು ಗಮನಸೆಳೆಯುತ್ತವೆ. ಈ ಸ್ತೂಪಗಳನ್ನು ಟೆರ್ರಾಕೋಟಾ ಮಾದರಿಯ ಮಣ್ಣಿನಿಂದ ನಿರ್ಮಿಸಲಾಗಿದೆ. ಅಕಾಲದಲ್ಲಿ ಮರಣ ಹೊಂದಿದ ಜೀವಿಗಳಿಗೆ ಮೋಕ್ಷ ದಕ್ಕಿಸಿಕೊಡಲು ಸ್ತೂಪದ ಎದುರು ನಿಂತು ಪ್ರಾರ್ಥನೆ ಮಾಡುವುದು ಪ್ರತೀತಿ. ಇದರಿಂದ, ಅಕಾಲಿಕವಾಗಿ ಮರಣ ಹೊಂದಿದ ಜೀವಿಗಳ ಆತ್ಮಕ್ಕೆ ಶಾಂತಿ ಕಲ್ಪಿಸಬಹುದು ಎಂಬ ಸದುದ್ದೇಶದಿಂದ ಈ ಸ್ತೂಪಗಳನ್ನು ರಚಿಸಲಾಗಿದೆ.

–ಕೃಷ್ಣಪ್ರಶಾಂತ್ ವಿ., ಗೇರುಕಟ್ಟೆ